# ಪ್ರಧಾನ ಸಿವಿಲ್ ನ್ಯಾಯಾದೀಶರು, ಜೆ.ಎಮ್.ಎಫ್. ಸಿ–2 ರಾಯಚೂರು

**ಸಿ.ಸಿ.ನಂ. 4320/2022**

**ಪಿ.ಡಬ್ಲ್ಯೂಃ 1**
**ಸಿ.ಡಬ್ಲ್ಯೂಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ. ಕವಿತ |
| ಗಂಡ ಹೆಸರು | ಃ | ರಾಮಕೃಷ್ಣ |
| ವಯಸ್ಸು | : | 40 ವರ್ಷ |
| ಉದ್ಯೋಗ | ಃ | ಅಬಕಾರಿ ನಿರೀಕ್ಷಕರು ಉಪ ವಿಭಾಗ |
| ವಾಸಸ್ಥಳ | : | ರಾಯಚೂರು |

ಇಂದು ದಿ:20–02–2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

2021 ರಿಂದ ಇಲ್ಲಿಯವರೆದ ರಾಯಚೂರಿನ ಅಬಕಾರಿ ಉಪವಿಭಾಗ ಇಲಾಖೆಯಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಾ ಇರುತ್ತೇನೆ.

ದಿನಾಂಕ 17–10–2021 ರಂದು ಬೆಳಿಗ್ಗೆ 08–00 ಗಂಟೆಗೆ ರಾಯಚೂರಿನ ಚಂದ್ರಬಂಡಾ ಗ್ರಾಮದಲ್ಲಿ ರಸ್ತೆ ಗಸ್ತು ಕರ್ತವ್ಯ ನಿರ್ವಹಿಸುತ್ತಿರುವಾಗ, ಆರೋಪಿತರ ಮನೆಯಲ್ಲಿ ಅಕ್ರಮವಾಗಿ ಸಿಹೆಚ್. ಪೌಡರ್, ಸಂಗ್ರಹಿಸಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾರೆಂದು ಬಂದ ಖಚಿತ ಮಾಹಿತಿ ಮೇರೆಗೆ, ಚಂದ್ರಬಂಡಾ ಗ್ರಾಮದಲ್ಲಿರುವ ಇಬ್ಬರು ಪಂಚರಾದ ಚಾ.ಸ.2 ಮತ್ತು 3 ರವರನ್ನು ಕರೆದುಕೊಂಡು ಸಿಬ್ಬಂದಿಗಳಾದ ಚಾ.ಸ.4 ರಿಂದ 9 ಮತ್ತು 11 ರಿಂದ 14 ರವರನ್ನು ದಾಳಿ ಮಾಡಲು ಸಹಕರಿಸುವಂತೆ ಕೋರಿ, ನಂತರ ನಮ್ಮ ಎರಡು ಇಲಾಖ ವಾಹನದಲ್ಲಿ ನಾಗನದೊಡ್ಡಿ ಗ್ರಾಮಕ್ಕೆ ಹೋಗಿ, ಆರೋಪಿತರ ಮನೆಯನ್ನು ತೋರಿಸುವಂತೆ ಸ್ಥಳಯರಲ್ಲಿ ವಿಚಾರಿಸಿದಾಗ, ನಾವು ಮನೆಯ ಹತ್ತಿರ ಹೋದಾಗ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಓಡಿ ಹೋಗಿದ್ದು ಆಗ ಆತನನ್ನು ಹಿಡಿಯಲು ನಮ್ಮ ಸಿಬ್ಬಂದಿ ಪ್ರಯತ್ನಿಸಿದರೂ ಆತನು ಸಿಕ್ಕಿರುವುದಿಲ್ಲ. ನಂತರ ಮನೆಗೆ ಬಂದು ಯಾರಾದರು ಇದ್ದಿರಿ ಅಂತ ಕರೆದಾಗ, ಮನೆಯಲ್ಲಿರುವ ಒಬ್ಬ ವ್ಯಕ್ತಿ ಹೊರಗೆ ಬಂದು ಆತನ ಹೆಸರು ವಿಚಾರಿಸಿದಾಗ, ಗುಡ್ಡಿ ರಂಗಪ್ಪ ಅಂತ ಪರಿಚಯಿಸಿ, ನಂತರ ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಿದಾಗ, ಆತನ ನನ್ನ ಮಗ ತಿರುಪತಿ ಅಂತ ತಿಳಿಸಿದ್ದು, ನಂತರ ನಮಗೆ ಬಂದ ಮಾಹಿತಿಯನ್ನು ಆತನಿಗೆ ತಿಳಿಸಿದಾಗ, ಆತ ಯಾವುದೇ ಉತ್ತರವನ್ನು ನೀಡದೆ ಗಾಬರಿಗೊಂಡಿದ್ದು,

ನಂತರ ಪಂಚರ ಸಮಕ್ಷಮ ಶೋಧಾನ ಸಮುಚಿತ ವರದಿಯನ್ನು ಸ್ಥಳದಲ್ಲಿ ತಯಾರಿಸಿ, ಮನೆಯನ್ನು ಶೋಧನೆ ಮಾಡಿದಾಗ, ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಗೊಬ್ಬರದ ಚೀಲದಲ್ಲಿ 1 ಕೆ.ಜಿ. ಸಾಮರ್ಥ್ಯದ 16 ಪ್ಯಾಕೆಟು ಕವರುಗಳಲ್ಲಿ ಒಟ್ಟು 16 ಕೆ.ಜಿ. ಸಿಹೆಚ್. ಪೌಡರ್ ಸಿಕ್ಕಿದ್ದು, ಅವುಗಳನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡು, ನಂತರ ಅದರ ಬಗ್ಗೆ ವಿಚಾರಿಸಿದಾಗ, ಅವುಗಳನ್ನು ಗ್ರಾಹಕರಿಗೆ ಮಾರಾಟ ಮಾಡುತ್ತೇವೆಂದು ಆರೋಪಿತನು ತಿಳಿಸಿದ್ದು, ನಂತರ ರಾಸಾಯನಿಕ ಪರೀಕ್ಷೆಗಾಗಿ 500 ಗ್ರಾಂ. ನಷ್ಟು ಸಿಹೆಚ್. ಪೌಡರ್ ಮಾದರಿಯಾಗಿ ತೆಗೆದು ಅದಕ್ಕೆ ಬಿಳಿ ಬಟ್ಟೆ ಸುತ್ತಿ ಅರಗು ಹಚ್ಚಿ, ನನ್ನ ಸಮಕ್ಷಮ ಪಂಚರ ಸಹಿಯನ್ನು ಪಡೆದಿರುತ್ತೇನೆ. ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಿಗ್ಗೆ 08-30 ರಿಂದ 10-00 ರವರೆಗೆ ಮಹಜರನ್ನು ಜರುಗಿಸಿ, ಆರೋಪಿತ ಮತ್ತು ಮುದ್ದೇಮಾಲುಗಳ ಸಮೇತ ಠಾಣೆಗೆ ಬಂದು ಸ್ವದೂರನ್ನು ತಯಾರಿಸಿ, ಠಾಣಾ ಗುನ್ನಾ ಸಂಖ್ಯೆ 10/2021-222 ರಂತೆ ಪ್ರಕರಣವನ್ನು ದಾಖಲಿಸಿ, ಪ್ರ.ವ.ವಯನ್ನು ತಯಾರಿಸಿ ಆರೋಪಿತರ ಸಮೇತ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಿಬ್ಬಂದಿಗಳಾದ ಚಾ.ಸ.4 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡು ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾ.ಸ.9 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 500 ಗ್ರಾಂ ಸಿಹೆಚ್. ಪೌಡರ್ ನೋಡಿ ಗುರುತಿಸಿದ್ದು ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರು ಈ ಪ್ರಕರಣದ ಆರೋಪಿತರಾಗಿರುತ್ತಾರೆ. ಸದರಿ ಸಾಕ್ಷಿಯು ಪಂಚನಾಮೆ, ದೂರು ಮತ್ತು ಪ್ರವ.ವಯನ್ನು ನೋಡಿ ಗುರುತಿಸದ್ದು ಅವುಗಳನ್ನು ನಿ.ಪಿ.1 ರಿಂದ ನಿ.ಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ರಿಂದ ನಿ.ಪಿ.3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಮಾನ್ಯ ವಕೀಲರಿಂದ:**

ಆರೋಪಿತರು ಸಿಹೆಚ್. ಪೌಡರ್ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಜಪ್ತಿ ಪಡಿಸಿಕೊಂಡು ಮುದ್ದೇಮಾಲಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನೀಡಿದ ಸ್ವದೂರಿಗೆ ಹಾಗೂ ದಾಖಲಿಸಿದ ಪ್ರಕರಣಕ್ಕೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಕೆ ಸಂಖ್ಯೆಗೋಸ್ಕರ ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಬಾತ್ಮಿ 08-00 ಗಂಟೆಗೆ ಬಂದಿರುತ್ತದೆ. ಚಂದ್ರಬಂಡಾದಿಂದ ಘಟನಾ ಸ್ಥಳವು 3 ರಿಂದ 4 ಕಿ. ಮೀ. ಅಂತರ

ಇರುತ್ತದೆ. ಪಂಚರಿಗೆ ನೋಟಿಸನ್ನು ನೀಡಿರುವುದಿಲ್ಲ. ಪಂಚರನ್ನು ನಾನು ಮತ್ತು ಸಿಬ್ಬಂದಿಯವರು ಕರೆದುಕೊಂಡು ಬಂದಿರುತ್ತೇವೆ. ಪಂಚರು ಚಂದ್ರಬಂಡಾದ ಮಾರೆಮ್ಮ ದೇವಸ್ಥಾನದ ಹತ್ತಿರ ಇದ್ದರು. ಅಲ್ಲಿ ಸುತ್ತಮುತ್ತಲಿನ ಸ್ಥಳೀಯರ ಹೇಳಿಕೆಯನ್ನು ಪಡೆದಿರುವುದಿಲ್ಲ.

ಪ್ರಕರಣಕ್ಕೆ ಅನುಕೂಲವಾಗುವ ಹಾಗೇ ಸಾಕ್ಷಿದಾರರ ಹೇಳಿಕೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ;</u>

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.** ಸಹಿ/-

ಜೆ.ಎಂ. ಎಫ್. ಸಿ.-2, ರಾಯಚೂರು